## ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ ರಾ ಪುರ

**FDP.No. 1/2012**

ಸಾಕ್ಷಿದಾರರ ಹೆಸರು ಃ ದಿನೇಶ್ ನಾಯಕ್ ಎಸ್

ತಂದೆಯ ಹೆಸರು ಃ ಸತ್ಯ ಷ್ಟ ಆರ್

**CW:3**

ವಯಸ್ಸು ಃ **27** ವರ್ಷ

ಉದ್ಯೋಗ ಃ ಎ ಇ , ಪಿ ಡಬ್ಲ್ಯೂಡಿ

ವಾಸಸ್ಥಳ ಃ ಕೊಪ್ಪ

ದಿನಾಂಕಃ **29.06.2024** ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆ ಮಾನ್ಯ ನ್ಯಾಯಾಲಯದಿಂದ ಃಃ

ಈ ದಾವೆಯಲ್ಲಿ ನನಗೆ ನ್ಯಾಯಾಲಯದಿಂದ ಕಮಿಷನರ್ ವರದಿ ಸಲ್ಲಿಸಲು ವಾರೆಂಟ್ ಜಾರಿಯಾಗಿದ್ದು, ನಾನು ಈ ಸಂಬಂಧ ಪಕ್ಷಗಾರರಿಗೆ ಮುಂಚಿತವಾಗಿ ನೋಟೀಸು ನೀಡಿ ಸ್ಥಳಕ್ಕೆ ಹೋಗಿ ಮಹಜರ್ ಮಾಡಿ, ನಕಾಶೆಯನ್ನು ತಯಾರಿಸಿ ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ಪಕ್ಷಗಾರರಿಗೆ ನೀಡಿರುವ ನೋಟೀಸು ಮತ್ತು ರಶೀದಿಯ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಸಿ-22 ಎಂದು ಗುರುತಿಸಲಾಯಿತು. ಸಾಕ್ಷಿ ಅಂಚೆ ರಶೀದಿಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಸಿ-23 ಎಂದು ಗುರುತಿಸಲಾಯಿತು. ಸಾಕ್ಷಿಯು ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಸಿ-24, ಸಾಕ್ಷಿಯ ಸಹಿಯನ್ನು ನಿಶಾನೆ ಸಿ-24(ಎ) ಎಂದು ಗುರುತಿಸಲಾಯಿತು. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಸಿ-25 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ. ಎಂ ಡಿ ವಕೀಲರಿಂದ ಃ

ನಾನು ಎ ಇ ಆಗಿ ಒಂದು ವರ್ಷದಿಂದ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ನಾನು ವಾರೆಂಟ್ ಬಂದ ನಂತರ ಪಕ್ಷಗಾರರಾದ 9 ಜನಕ್ಕೆ ನೋಟೀಸು ನೀಡಿದ್ದು, ಅದರಲ್ಲಿ

ಅರ್ಜಿದಾರರು , 2 ನೇ ಎದುರುದಾರರು, 4 ನೇ ಎದುರುದಾರರು ಹಾಗೂ ಮತ್ತೊಂದು ಎದುರುದಾರರು ಈಗ ಹೆಸರು ನೆನಪಿಲ್ಲ ರವರು ಮಾತ್ರ ಹಾಜರಿರುತ್ತಾರೆ. ನಿಶಾನೆ ಸಿ-23 ರಲ್ಲಿ ಸಹಿ ಮಾಡಿರುವ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಶಾನೆ ಸಿ -23 ರಲ್ಲಿ ನಾನು ಪಡೆದುಕೊಂಡ ಸಹಿಯು ಈ ದಾವೆಯ ಪಕ್ಷಗಾರರದ್ದಲ್ಲ ಎಂದರೆ ಸರಿಯಲ್ಲ. ಸದರಿಯವರು ಯಾರು ಎಂದು ನಾನು ನಿಶಾನೆ ಸಿ-23 ರಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ.

ಈ ಹಿಂದೆ ಆಗಿರುವ ಡಿಕ್ರಿ ಕಾಪಿಯನ್ನು ನಾನು ತೆಗೆದುಕೊಂಡು ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ಡಿಕ್ರಿ ಕಾಪಿಯಲ್ಲಿ 10 ಗುಂಟೆ ಜಾಗದ ಬಗ್ಗೆ ತೋರಿಸಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ 10 ಗುಂಟೆ ಪ್ರದೇಶವಿದ್ದು ಪಕ್ಷಗಾರರ ಸಮಕ್ಷಮ ನಕಾಶೆ ಮಾಡಿರುತ್ತೇನೆ. ಸದರಿ ಪ್ರದೇಶದಲ್ಲಿ ಡಿಕ್ರಿ ಕಾಪಿ ಪ್ರಕಾರ 10 ಗುಂಟೆ ಆಗಿದ್ದು ಅಸೆಸ್ಮೆಂಟ್ 2 ಗುಂಟೆಗೆ ಮಾತ್ರ ಆಗಿದ್ದು, ಉಳಿದ ಪ್ರದೇಶವು ಅರಣ್ಯ ಇಲಾಖೆಗೆ ಸಂಬಂಧಿಸಿದ ಜಾಗ ಆಗಿರುತ್ತದೆ ಎಂದರೆ ಸಾಕ್ಷಿಯ ಹಳೆ ನಕಾಶೆ ಇದ್ದು ನಾನು ಪರಿಶೀಲಿಸಿರುತ್ತೇನೆ. ಹಳೆ ನಕಾಶೆ ಪ್ರಕಾರ ನಾನು ಪರೀಕ್ಷಿಸಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಕಾಶೆಯನ್ನು ನಾನು ಖುದ್ದಾಗಿ ತಯಾರು ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಅಳತೆ ಮಾಡಿ ವರದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 4 ನೇ ಎದುರುದಾರರು ನನಗೆ ಸ್ಥಳದ ಬಗ್ಗೆ ಒಂದು ನೋಟಿಫಿಕೇಶನ್ ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟಿಫಿಕೇಶನ್ ಪ್ರಕಾರ ಯಾವ ಸರ್ವೆನಂಬರ್ ನಲ್ಲಿ ಎಷ್ಟು ಜಾಗ ಅರಣ್ಯ ಇಲಾಖೆಗೆ ಹೋಗಿರುತ್ತದೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ನಾನು ನೋಟಿಫಿಕೇಶನ್ ಪ್ರಕಾರ ಅರಣ್ಯ ಇಲಾಖೆ ಅಥವಾ ತಹಶೀಲ್ದಾರ್ ರವರಿಂದ ಯಾವುದೇ ದಾಖಲೆ ಪಡೆದುಕೊಂಡಿರುವುದಿಲ್ಲ. ಸದರಿ ಪ್ರದೇಶದ ಅಸೆಸ್ಮೆಂಟ್ ನಂಬರ್ ನನಗೆ ಗೊತ್ತಿಲ್ಲ. 2 ಗುಂಟೆಗೆ ಸಂಬಂಧಿಸಿ ನಾನು ಅಸೆಸ್ಮೆಂಟ್ ಪಡೆದುಕೊಂಡಿರುವುದಿಲ್ಲ.

ಯಾವ ಪರಿಕರಗಳಿಂದ ಅಳತೆ ಮಾಡಿರುತ್ತೇನೆಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಟೇಪಿನಿಂದ ಅಳತೆ ಮಾಡಿರುತ್ತೇನೆಂದು ನುಡಿಯುತ್ತಾರೆ. ನಾನು ಖುದ್ದಾಗಿ ಅಳತೆ ಮಾಡಿದ್ದು ಅದರ ಅಳತೆ ನಿಶಾನೆ ಸಿ-24 ರಲ್ಲಿ ನಮೂದಿಸಿರುತ್ತೇನೆ. ನಾನು ನಿಶಾನೆ ಸಿ-24 ಮಾಡುವ ಸಮಯದಲ್ಲಿ ಕಚ್ಚಾ ನಕಾಶೆ ಮಾಡಿರುವುದಿಲ್ಲ. ಹಿಂದೆ ಕಮಿಷನರ್ ನೀಡಿರುವ ದಾಖಲೆಗಳ ಯಥಾ ನಕಲು ನೀಡಿರುತ್ತೇನೆಂದರೆ ಸಾಕ್ಷಿಯು ನಾನು ಪರಿಶೀಲನೆ ಮಾಡಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. 4 ನೇಎದುರುದಾರರು 8 ಗುಂಟೆ ಬಗ್ಗೆ ಪರಿಶೀಲನೆ ನಡೆಸಲು ನನಗೆ

ನೋಟಿಫಿಕೇಶನ್ ಕೊಟ್ಟು ಅದರ ಪ್ರತಿ ಮೇಲೆ ಸಹಿ ಮಾಡಲು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಮನೆ ಚೆಕ್ಕುಬಂಧಿಯನ್ನು ನಕಾಶೆಯಲ್ಲಿ ನಮೂದು ಮಾಡಿರುವುದಿಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿ ಅಳತೆ ಮಾಡಿ ನಕಾಶೆ ತಯಾರಿಸಿ ವರದಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಹಿಂದೆ ಮಾಡಿರುವ ಅಳತೆ, ನಕಾಶೆ ಹಾಗೂ ವರದಿಯ ಯಥಾ ನಕಲನ್ನು ನ್ಯಾಯಾಲಯಲ್ಲಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.

**(ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

**(ದಿನಾಂಕಃ 29.06.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ ರಾ ಪುರ.

ಸಾಕ್ಷಿ ಸಹಿಃ